# ತುಮಕೂರು ವಿಶ್ವವಿದ್ಯಾನಿಲಯ

ಪರೀಕ್ಷಾ ಭವನ, ಬಿ.ಹೆಚ್.ರಸ್ತೆ, ತುಮಕೂರು-572 103 ☎:0816-2255650, 2273511,ಫ್ಯಾಕ್ಸ್ :0816-2270719

ಸಂಖ್ಯೆ : ತು.ವಿ.: ಪ.ವಿ.:ವಿ.ನಿ.-09:2024-25: 637 . ದಿನಾಂಕ:28.10.2024

## : ಅಧಿಸೂಚನೆ :

**ವಿಷಯ: 2023-24ನೇ ಸಾಲಿನ 2024-25ರ ಡಿಸೆಂಬರ್/ಜನವರಿ ಮಾಹೆಗಳಲ್ಲಿ ನಡೆಯಲಿರುವ ಸ್ನಾತಕೋತ್ತರ ಎಂ.ಬಿ.ಎ/ಎಂ.ಸಿ.ಎ ದ್ವಿತೀಯ ಮತ್ತು ನಾಲ್ಕನೇ ಸೆಮಿಸ್ಟರ್‌ನ (ನವೀನ ಮತ್ತು ಪೂರಕ) ಎಲ್. ಎಲ್. ಎಂ, ಎಂ.ಬಿ.ಎ ಇನ್ ಫೈನಾಸ್ ಪದವಿಗಳ ದ್ವಿತೀಯ, ಸೆಮಿಸ್ಟರ್ ಪರೀಕ್ಷೆಗಳಿಗೆ ಹಾಗೂ 2021-22ನೇ ಶೈಕ್ಷಣಿಕ ಸಾಲಿನಿಂದ 2023-24ನೇ ಸಾಲಿಗೆ ಪ್ರವೇಶ ಪಡೆದಿರುವ (ನವೀನ ಮತ್ತು ಪೂರಕ) ಮತ್ತು 2020-21ನೇ ಶೈಕ್ಷಣಿಕ ಸಾಲಿನ ಪೂರಕ ಎಲ್ಲಾ ಅರ್ಹ ವಿದ್ಯಾರ್ಥಿಗಳಿಂದ ಪರೀಕ್ಷಾ ಶುಲ್ಕ ಪಾವತಿಸುವ ಕುರಿತು.**

* * * * *

2024-25ರ **ಡಿಸೆಂಬರ್/ಜನವರಿ** ಮಾಹೆಗಳಲ್ಲಿ ನಡೆಯಲಿರುವ ಸ್ನಾತಕೋತ್ತರ ಪದವಿಗಳ **ದ್ವಿತೀಯ ಮತ್ತು ನಾಲ್ಕನೇ ಸೆಮಿಸ್ಟರ್‌ನ ಎಂ.ಬಿ.ಎ/ಎಂ.ಸಿ.ಎ** (ನವೀನ ಮತ್ತು ಪೂರಕ) ಮತ್ತು ಎಲ್.ಎಲ್.ಎಂ ಹಾಗೂ ಎಂ.ಬಿ.ಎ ಇನ್ ಫೈನಾಸ್ (ನವೀನ) ಪದವಿಗಳಿಗೆ UUCMS ತಂತ್ರಾಂಶದ ಮೂಲಕ (ಶೈಕಣಿಕ ವಿಭಾಗದಿಂದ ಪ್ರವೇಶಾನುಮೋದನೆ ಪಡೆದಿರುವಂತಹ) **ಎಲ್ಲಾ ಅರ್ಹ ವಿದ್ಯಾರ್ಥಿಗಳಿಂದ** ಪರೀಕ್ಷಾ ಶುಲ್ಕವನ್ನು ಪಾವತಿಸಿಕೊಳ್ಳುವುದು.

2020-21ನೇ ಶೈಕ್ಷಣಿಕ ಸಾಲಿನಲ್ಲಿ ಪ್ರವೇಶ ಪಡೆದಿರುವ ಪೂರಕ ವಿದ್ಯಾರ್ಥಿಗಳಿಂದ ಪರೀಕ್ಷಾ ಶುಲ್ಕವನ್ನು ಪಾವತಿಸಕೊಂಡು EMS ತಂತ್ರಾಂಶದಲ್ಲಿ ವಿವರಗಳನ್ನು ನಮೂದಿಸುವುದು.

ಪ್ರಸಕ್ತ ಸಾಲಿನ ಸ್ನಾತಕೋತ್ತರ ಪದವಿಗಳ ಪ್ರಥಮ ಸೆಮಿಸ್ಟರ್‌ಗೆ ಪ್ರವೇಶಾತಿ ಪಡೆದ ವಿದ್ಯಾರ್ಥಿಗಳ ಸಂಪೂರ್ಣ ದತ್ತಾಂಶವನ್ನು **ಸಮಗ್ರ ವಿಶ್ವವಿದ್ಯಾನಿಲಯ ಮತ್ತು ಕಾಲೇಜು ನಿರ್ವಹಣಾ ವ್ಯವಸ್ಥೆ** UUCMS ತಂತ್ರಾಂಶದ ಮೂಲಕ ನಿರ್ವಹಿಸಲಾಗುತ್ತಿದ್ದು, ಸದರಿ ತಂತ್ರಾಂಶದಲ್ಲಿ ವಿಶ್ವವಿದ್ಯಾನಿಲಯದಿಂದ ಕಾಲೇಜು ಪ್ರಾಂಶುಪಾಲರು, ವಿಭಾಗದ ಮುಖ್ಯಸ್ಥರು/ಅಧ್ಯಕ್ಷರು/ಸಂಯೋಜಕರು, ಅಧ್ಯಾಪಕರು,ವಿದ್ಯಾರ್ಥಿಗಳು ಇತ್ಯಾದಿ ಹಂತಗಳವರೆಗೆ ಸೂಕ್ತ ಜವಾಬ್ದಾರಿಗಳನ್ನು ಹಂಚಿಕೆ ಮಾಡಿ ಪ್ರತ್ಯೇಕ ಲಾಗಿನ್ ವಿವರಗಳನ್ನು ಒದಗಿಸಲಾಗಿರುತ್ತದೆ. ಇದೊಂದು ಹೊಸ ವ್ಯವಸ್ಥೆಯಾಗಿರುವುದರಿಂದ ಸಂಬಂಧಪಟ್ಟ ವಿದ್ಯಾರ್ಥಿಗಳಿಗೆ ಸೂಕ್ತ ಮಾರ್ಗದರ್ಶನ ಮತ್ತು ಸಹಾಯ ಒದಗಿಸಲು ತಿಳಿಸಲಾಗಿದೆ.

ಸಂಬಂಧಪಟ್ಟ ವಿಭಾಗದ ಮುಖ್ಯಸ್ಥರು/ಸಂಯೋಜಕರು ಮತ್ತು ಕಾಲೇಜು ಪ್ರಾಂಶುಪಾಲರು UUCMS ತಂತ್ರಾಂಶದ ಮೂಲಕ ಪರೀಕ್ಷಾ ಶುಲ್ಕವನ್ನು ಪಾವತಿಸುವುದು. ವಿದ್ಯಾರ್ಥಿಗಳು ಭರ್ತಿ ಮಾಡಿದ ಅರ್ಜಿ ನಮೂನೆಗಳನ್ನು ಪರಿಶೀಲಿಸಿ UUCMS /EMS ತಂತ್ರಾಂಶದ ಮೂಲಕ ಅನುಮೋದಿಸುವುದು ಹಾಗೂ ವಿದ್ಯಾರ್ಥಿಗಳ ಪ್ರವೇಶಾನುಮೋದನೆ, ಪರೀಕ್ಷೆ ತೆಗೆದುಕೊಳ್ಳುವವರ ಅಂಕಿ-ಅಂಶಗಳನ್ನು ಬಾಹ್ಯವಾಗಿಯೂ ಕ್ರೋಢೀಕರಿಸಿ ಶುಲ್ಕದ ವಿವರಗಳೊಂದಿಗೆ ವಿಶ್ವವಿದ್ಯಾನಿಲಯಕ್ಕೆ **19.11.2024 ದಿನಾಂಕದೊಳಗೆ** ಈ ಕೆಳಕಂಡ ನಮೂನೆಯಂತೆ ಭರ್ತಿ ಮಾಡಿ ಸಲ್ಲಿಸತಕ್ಕದ್ದು.

| ಪರೀಕ್ಷಾ ಶುಲ್ಕಗಳ ವಿವರ - (Freshers/Repeaters-UUCMS) | | | |
|---|---|---|---|
| ಕ್ರ.ಸಂ. | ಪದವಿಗಳವ ವಿವರ | ಪರೀಕ್ಷಾ ಶುಲ್ಕ | ಪೂರಕ (ಒಂದು ವಿಷಯಕ್ಕೆ) |
| 1 | ಎಂ.ಬಿ.ಎ | 2000.00 | 485-00 |
| 2 | ಎಂ.ಸಿ.ಎ | 2450.00 | 485-00 |
| 3 | ಎಂ.ಬಿ.ಎ ಇನ್ ಫೈನಾಸ್ | 2000.00 | - |
| 4 | ಎಲ್.ಎಲ್.ಎಂ | 2450.00 | - |
| ಇತರೆ ಶುಲ್ಕಗಳು ಎಲ್ಲಾ ವಿದ್ಯಾರ್ಥಿಗಳೂ ಸಹ ಈ ಕೆಳೆಗೆ ನಮೂದಿಸಿರುವ ಇತರೆ ಶುಲ್ಕಗಳನ್ನು ಕಡ್ಡಾಯವಾಗಿ ಪಾವತಿಸುವುದು. (ಅನ್ವಯಿಸುವ ಶುಲ್ಕಗಳು ಮಾತ್ರ): | | | |
| 1. | ಅಂಕಪಟ್ಟಿ ಶುಲ್ಕ | 156.00 | |
| 2. | ಆನ್ ಲೈನ್ ಅರ್ಜಿ ಶುಲ್ಕ | 30.00 | |
| 3. | ಅರ್ಜಿ ಪರಿಶೀಲನಾ ಶುಲ್ಕ | 10.00 | |
| 4. | ಪರೀಕ್ಷಾ ಸಿದ್ಧಾ ಶುಲ್ಕ (Process fee) | 40.00 | |

(ಮು.ತಿ.ನೋ.)

ಪರೀಕ್ಷಾ ಶುಲ್ಕಗಳ ವಿವರ (Repeaters EMS-2020-21)

| ಕ್ರ.ಸಂ. | ಪದವಿಗಳ ವಿವರ | ಪರೀಕ್ಷಾ ಶುಲ್ಕ | ಪೂರಕ ಒಂದು ವಿಷಯಕ್ಕೆ ) |
|---|---|---|---|
| 1. | ಎಂ.ಬಿ.ಎ | 2450.00 | 485-00 |
| 2. | ಎಂ.ಸಿ.ಎ | 2000.00 | 485-00 |

ವಿದ್ಯಾರ್ಥಿಯು ಮೂರು ಅಥವಾ ಮೂರಕ್ಕಿಂತ ಹೆಚ್ಚು ವಿಷಯಗಳಿದ್ದಲ್ಲಿ ಸೆಮಿಸ್ಟರ್‌ವಾರು ಪೂರ್ಣ ಶುಲ್ಕವನ್ನು ಕಡ್ಡಾಯವಾಗಿ ಪಾವತಿಸಬೇಕು. ಎಲ್ಲಾ ವರ್ಗಗಳ ಪೂರಕ 2020-21ನೇ ಶೈಕ್ಷಣಿಕ ಸಾಲಿನ EMS ವಿದ್ಯಾರ್ಥಿಗಳಿಂದ ಪೂರ್ಣ ಪ್ರಮಾಣದ (ಸೆಮಿಸ್ಟರ್‌ವಾರು) ಪರೀಕ್ಷಾ ಶುಲ್ಕವನ್ನು ಕಡ್ಡಾಯವಾಗಿ ಪಾವತಿಸಿಕೊಳ್ಳುವುದು. ಎಲ್ಲಾ ವರ್ಗದ ವಿದ್ಯಾರ್ಥಿಗಳೂ ಸಹ ಈ ಕೆಳಗೆ ನಮೂದಿಸಿರುವ ಶುಲ್ಕವನ್ನು ಕಡ್ಡಾಯವಾಗಿ ಪಾವತಿಸುವುದು. (ಪ್ರತಿ ಸೆಮಿಸ್ಟರ್‌ಗೆ ಅನ್ವಯಿಸುವಂತೆ)

ಇತರೆ ಶುಲ್ಕಗಳು

| | | |
|---|---|---|
| 1. | ಅಂಕಪಟ್ಟಿ ಶುಲ್ಕ | 156.00 |
| 2. | ಆನ್ ಲೈನ್ ಅರ್ಜಿ ಶುಲ್ಕ | 30.00 |
| 3. | ಅರ್ಜಿ ಪರಿಶೀಲಾನ ಶುಲ್ಕ | 10.00 |
| 4. | ಪರೀಕ್ಷಾ ಸಿದ್ದತಾ ಶುಲ್ಕ (Process fee) | 40.00 |
| 5. | ಪ್ರಾಯೋಗಿಕ ಶುಲ್ಕ (per practical) | 150.00 |
| 6. | ಪ್ರಾಜೆಕ್ಟ್ ಶುಲ್ಕ (per project) | 200.00 |
| 7. | ಕಿರು ಪ್ರಬಂಧ ಶುಲ್ಕ (per Dissertation) | 200.00 |
| 8. | ಮೌಖಿಕ ಸಂದರ್ಶನ (per viva-voce) | 150.00 |

ನಾಲ್ಕನೇ ಸೆಮಿಸ್ಟರ್ ವಿದ್ಯಾರ್ಥಿಗಳಿಗೆ ಅನ್ವಯಿಸಿದ್ದಲ್ಲಿ ಮಾತ್ರ (Dissertation/ Project Work/per Viva-Voce) 200+150=350/- ಶುಲ್ಕವನ್ನು (UUCMS) ಎಲ್ಲಾ ವಿದ್ಯಾರ್ಥಿಗಳು SB Collect ನಲ್ಲಿ Finance officer Tumkur University, Tumkur ಮುಖಾಂತರ ಶುಲ್ಕವನ್ನು ಪಾವತಿಸಿ ರಸೀದಿಯನ್ನು ಸಂಬಂಧಪಟ್ಟ ವಿಭಾಗಗಳು/ಕಾಲೇಜುಗಳಿಗೆ ಸಲ್ಲಿಸುವುದು.

ವಿಶೇಷ ಸೂಚನೆ:

1. 2020-21 ನೇ ಶೈಕ್ಷಣಿಕ ಸಾಲಿನಲ್ಲಿ ಪ್ರವೇಶ ಪಡೆದಿರುವ ದ್ವಿತೀಯ ಮತ್ತು ನಾಲ್ಕನೇ (ಪೂರಕ) ಸೆಮಿಸ್ಟರ್ ನ ಎಲ್ಲಾ ಅರ್ಹ ವಿದ್ಯಾರ್ಥಿಗಳಿಂದ ಮಾತ್ರ ಪರೀಕ್ಷಾ ಶುಲ್ಕ ಪಾವತಿಸಿಕೊಂಡು ಸದರಿ ವಿದ್ಯಾರ್ಥಿಗಳ ವಿವರವನ್ನು EMS ನಲ್ಲಿ ಕಡ್ಡಾಯವಾಗಿ ನಮೂದಿಸುವುದು.
2. ಪರೀಕ್ಷೆಗಳಿಗೆ ಹಾಜರಾಗುವ ವಿದ್ಯಾರ್ಥಿಗಳ ಶುಲ್ಕದ ವಿವರಗಳನ್ನು ವಿಷಯದೊಂದಿಗೆ ಆನ್‌ಲೈನ್‌ನಲ್ಲಿ ನಮೂದಿಸುವುದು. ಆನ್‌ಲೈನ್ ಪರೀಕ್ಷಾ ಅರ್ಜಿಗಳ ಆಧಾರದಲ್ಲಿ ಪ್ರಶ್ನೆ ಪತ್ರಿಕೆಗಳನ್ನು ವಿತರಿಸಲಿದ್ದು, ವಿಷಯಗಳಿಗೆ/ಪತ್ರಿಕೆಗಳಿಗೆ ಕೋಡ್‌ಗಳನ್ನು ಪರಿಶೀಲಿಸಿ ಆನ್‌ಲೈನ್ ಮೂಲಕ ಪರೀಕ್ಷಾ ಅರ್ಜಿಯನ್ನು ಸಲ್ಲಿಸತಕ್ಕದ್ದು.
3. ಪರೀಕ್ಷಾ ವೇಳಾಪಟ್ಟಿ ಮತ್ತು ಪರೀಕ್ಷಾ ಕೇಂದ್ರಗಳ ವಿವರಗಳನ್ನು ನಂತರದ ದಿನಗಳಲ್ಲಿ ತಿಳಿಸಲಾಗುವುದು.

ಗಮನಿಸಬೇಕಾದ ದಿನಾಂಕಗಳು

| | | |
|---|---|---|
| 1. | ಪರೀಕ್ಷಾ ಶುಲ್ಕ ಪಾವತಿಸಲು ಪ್ರಾರಂಭ ದಿನಾಂಕ | 29.10.2024 |
| 2. | ವಿದ್ಯಾರ್ಥಿಗಳಿಗೆ ದಂಡ ರಹಿತ ಶುಲ್ಕ ಪಾವತಿಸಲು ಕೊನೆಯ ದಿನಾಂಕ | 14.11.2024 |
| 3. | ವಿದ್ಯಾರ್ಥಿಗಳಿಗೆ ರೂ 100/- ದಂಡ ಶುಲ್ಕದೊಂದಿಗೆ ಶುಲ್ಕ ಪಾವತಿಸಲು ಕೊನೆಯ ದಿನಾಂಕ | 16.11.2024 |
| 4. | ವಿದ್ಯಾರ್ಥಿಗಳಿಗೆ ರೂ 500/- ದಂಡ ಶುಲ್ಕದೊಂದಿಗೆ ಶುಲ್ಕ ಪಾವತಿಸಲು ಕೊನೆಯ ದಿನಾಂಕ | 18.11.2024 |
| 5. | ಕಾಲೇಜಿನವರು ವಿದ್ಯಾರ್ಥಿಗಳ ಪರೀಕ್ಷಾ ಶುಲ್ಕದ ವಿವರಗಳನ್ನು UUCMS ಮೂಲಕ ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಲು ಕೊನೆಯ ದಿನಾಂಕ | 19.11.2024 |

(ಮು.ತಿ.ನೋ.)

**ಕಾಲೇಜು/ವಿಭಾಗದ ವಿದ್ಯಾರ್ಥಿಗಳು ಆಯ್ಕೆ ಮಾಡಿಕೊಂಡಿರುವ ಮುಕ್ತ ಆಯ್ಕೆ ಪತ್ರಿಕೆಗಳನ್ನು (Open Elective Papers) ಖಚಿತಪಡಿಸಿಕೊಂಡು ನಂತರ ಸರಿಯಾಗಿ ಆನ್‌ಲೈನ್‌ಲ್ಲಿ ನಮೂದಿಸುವುದು.**

- ಪರೀಕ್ಷೆಗಳಿಗೆ ಹಾಜರಾಗುವ ವಿದ್ಯಾರ್ಥಿಗಳ ಶುಲ್ಕದ ವಿವರವನ್ನು ವಿಷಯದೊಂದಿಗೆ ಆನ್‌ಲೈನ್‌ನಲ್ಲಿ ನಮೂದಿಸುವುದು. ಆನ್‌ಲೈನ್ ಪರೀಕ್ಷಾ ಅರ್ಜಿಗಳ ಆಧಾರದಲ್ಲಿ ಪ್ರಶ್ನೆ ಪತ್ರಿಕೆಗಳನ್ನು ವಿತರಿಸಲಿದ್ದು, ಪ್ರತ್ಯೇಕವಾಗಿ ಪ್ರಶ್ನೆ ಪತ್ರಿಕೆ ಕೋರಿಕೆ ಪಟ್ಟಿ ಸಲ್ಲಿಸುವ ಅವಶ್ಯಕತೆ ಇರುವುದಿಲ್ಲ. ಸಂಬಂಧಿಸಿದ ವಿಷಯಗಳಿಗೆ/ ಪತ್ರಿಕೆಗಳಿಗೆ ಕೋಡ್‌ಗಳನ್ನು ಪರಿಶೀಲಿಸಿ ಆನ್‌ಲೈನ್ ಮೂಲಕ ಪರೀಕ್ಷಾ ಅರ್ಜಿಯನ್ನು ಸಲ್ಲಿಸತಕ್ಕದ್ದು. ಆನ್‌ಲೈನ್ ಪರೀಕ್ಷಾ ಅರ್ಜಿಯಲ್ಲಿ ವಿಷಯ/ಪತ್ರಿಕೆಗಳ ಕೋಡ್‌ನ್ನು ತಪ್ಪಾಗಿ ನಮೂದಿಸಿದಲ್ಲಿ, ಈ ಕಾರಣದಿಂದಾಗಿ ಪ್ರಶ್ನೆ ಪತ್ರಿಕೆಯಲ್ಲಿನ ಸರಬರಾಜು ಮಾಡುವುದರಲ್ಲಿ ವ್ಯತ್ಯಯವಾದಲ್ಲಿ ಸಂಬಂಧಪಟ್ಟ ನಿರ್ದೇಶಕರು/ಪ್ರಾಂಶುಪಾಲರು/ಮುಖ್ಯಸ್ಥರನ್ನೇ ನೇರವಾಗಿ ಜವಾಬ್ದಾರರನ್ನಾಗಿ ಮಾಡಲಾಗುವುದು.
- ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯ ಕಾಯ್ದೆ 2000 ರ ಅಧಿನಿಯಮ 60, 61 & 68 ರಂತೆ ವಿಶ್ವವಿದ್ಯಾನಿಲಯದಿಂದ ದಾಖಲಾತಿ ಅನುಮೋದನೆಗೊಳ್ಳದ ವಿದ್ಯಾರ್ಥಿಗಳಿಂದ ಪರೀಕ್ಷಾ ಶುಲ್ಕವನ್ನು ಪಾವತಿಸಿಕೊಳ್ಳಬಾರದು ಮತ್ತು ಪರೀಕ್ಷಾ ಶುಲ್ಕ ಪಾವತಿಸಲು ಅನುಮತಿ ನೀಡಬಾರದು.
- ಮುಖ್ಯಸ್ಥರು/ನಿರ್ದೇಶಕರು/ಪ್ರಾಂಶುಂಪಾಲರುಗಳಿಗೆ ಈ ಮೂಲಕ ತಿಳಿಸುವುದೇನೆಂದರೆ, ಆನ್‌ಲೈನ್‌ನಲ್ಲಿ ಕೋರುವ ಎಲ್ಲಾ ಮಾಹಿತಿಯನ್ನು ಸರಿಯಾಗಿ ನಮೂದಿಸಬೇಕು.
- **ವಿದ್ಯಾರ್ಥಿಯು ಪರೀಕ್ಷಾ ಶುಲ್ಕ ಪಾವತಿಸಿದಾಕ್ಷಣ ಪರೀಕ್ಷೆ ಬರೆಯಲು ಅರ್ಹನೆಂದು ತಿಳಿಯಬಾರದು. ವಿಶ್ವವಿದ್ಯಾನಿಲಯದ ನಿಯಮಾನುಸಾರ ಅರ್ಹತೆಯಿದ್ದಲ್ಲಿ ಮಾತ್ರ ಪರೀಕ್ಷೆ ಬರೆಯಲು ಅವಕಾಶವಿರುತ್ತದೆ.**
- **ವಿದ್ಯಾರ್ಥಿಗಳು ಯಾವುದೇ ಕಾರಣಕ್ಕೂ ಪರೀಕ್ಷಾ ಕೇಂದ್ರವನ್ನು ಬದಲಾಯಿಸುವಂತಿಲ್ಲ.**
- **ಪರೀಕ್ಷಾ ಕೇಂದ್ರ ಹೊಂದಿರುವ ಕಾಲೇಜಿನವರು ತಮ್ಮ ಕೇಂದ್ರದಲ್ಲಿ ಪರೀಕ್ಷೆ ನಡೆಯುವ ಒಟ್ಟು ದಿನಗಳಲ್ಲಿ ಒಂದು ದಿನದ ಗರಿಷ್ಠ ವಿದ್ಯಾರ್ಥಿಗಳ ಸಂಖ್ಯೆಯನ್ನು ನಮೂದಿಸಿ ಪ್ರತಿ ವಿದ್ಯಾರ್ಥಿಗೆ ವಿಶ್ವವಿದ್ಯಾನಿಲಯವು ವಿಭಾಗವಾರು ನಿಗದಿಪಡಿಸಿರುವ ದರಗಳಂತೆ ಪ್ರತ್ಯೇಕ ಹುಂಡಿಗಳನ್ನು ಸಿದ್ಧಪಡಿಸಿ ಪರೀಕ್ಷಾ ವಿಭಾಗಕ್ಕೆ ಸಲ್ಲಿಸುವುದು.

**ವಿದ್ಯಾರ್ಥಿಯು ಪರೀಕ್ಷಾ ಶುಲ್ಕ ಪಾವತಿಸಿದಾಕ್ಷಣ ಪರೀಕ್ಷೆ ಬರೆಯಲು ಅರ್ಹನೆಂದು ತಿಳಿಯಬಾರದು. ವಿಶ್ವವಿದ್ಯಾನಿಲಯದ ನಿಯಮಾನುಸಾರ ಅರ್ಹತೆಯಿದ್ದಲ್ಲಿ ಮಾತ್ರ ಪರೀಕ್ಷೆ ಬರೆಯಲು ಅವಕಾಶವಿರುತ್ತದೆ. ಯಾವುದೇ ಕಾರಣಕ್ಕೂ ಪರೀಕ್ಷಾ ಕೇಂದ್ರವನ್ನು ಬದಲಾಯಿಸುವಂತಿಲ್ಲ.**

**ಟಿ.ಸೂ.: ಪರೀಕ್ಷಾ ಶುಲ್ಕ ಪಾವತಿಸಿರುವ ಪಟ್ಟಿಯನ್ನು ದ್ವಿ-ಪ್ರತಿಗಳಲ್ಲಿ ಪರೀಕ್ಷಾಂಗ ವಿಭಾಗಕ್ಕೆ ಒಂದು ಪ್ರತಿ ಮತ್ತು ಹಣಕಾಸು ವಿಭಾಗಕ್ಕೆ ಒಂದು ಪ್ರತಿಯನ್ನು ದಿನಾಂಕ: 21.11.2024 ತಪ್ಪದೇ ಈ ಕೆಳಕಂಡ ನಮೂನೆಯಲ್ಲಿ ಸಲ್ಲಿಸುವುದು.**

**ನಮೂನೆ**

| ಕ್ರ.ಸಂ. | ವಿದ್ಯಾರ್ಥಿಯ ಹೆಸರು | ನೋಂದಣಿ ಸಂಖ್ಯೆ | ತೆಗೆದುಕೊಂಡಿರುವ ವಿಷಯ | ಸೆಮಿಸ್ಟರ್ | ಶುಲ್ಕ ಪಾವತಿಸಿದ ವಿವರ & ದಿನಾಂಕ |
|---|---|---|---|---|---|
| 1. | | | | | |
| 2. | | | | | |

ವಿಶ್ವವಿದ್ಯಾನಿಲಯ ಧನಸಹಾಯ ಆಯೋಗ(ಯು.ಜಿ.ಸಿ.)ದ ನಿರ್ದೇಶನದ ಅನುಸಾರ **D.O.No.F.12-1/2015 (CPP-II) 15th October 2015,** ವಿದ್ಯಾರ್ಥಿಯು ಸ್ನಾತಕೋತ್ತರ ಪದವಿಗೆ ಪ್ರವೇಶ ಪಡೆದ ವರ್ಷದಿಂದ 04 ಶೈಕ್ಷಣಿಕ ವರ್ಷದೊಳಗೆ ಸ್ನಾತಕೋತ್ತರ ಪದವಿಯನ್ನು ಪೂರ್ಣಗೊಳಿಸಬೇಕಾಗಿರುತ್ತದೆ.

ಪ್ರಾಯೋಗಿಕ ಪರೀಕ್ಷೆಗಳನ್ನು ಸೈದ್ಧಾಂತಿಕ ಪರೀಕ್ಷೆಗಳ ನಂತರ UUCMS ತಂತ್ರಾಂಶದಲ್ಲಿ ನಿಗಧಿಪಡಿಸಲಾದ ದಿನಾಂಕದೊಳಗೆ ನಡೆಸತಕ್ಕದ್ದು. ಪ್ರಾಯೋಗಿಕ ಪರೀಕ್ಷಾ ವೇಳಾಪಟ್ಟಿಯನ್ನು ಸಂಬಂಧಿಸಿದ ಪರೀಕ್ಷಾ ಮಂಡಳಿ ಅಧ್ಯಕ್ಷರುಗಳಿಂದ ಅನುಮೋದನೆ ಪಡೆದುಕೊಂಡು UUCMS ತಂತ್ರಾಂಶದಲ್ಲಿ ನಮೂದಿಸುವುದು ಮತ್ತು ಮುಖ್ಯಸ್ಥರು/ ಸಂಯೋಜಕರು/ಪ್ರಾಂಶುಪಾಲರುಗಳು ಸಂಬಂಧಿಸಿದ ಪರೀಕ್ಷಾ ಕೇಂದ್ರಗಳಲ್ಲಿ ಪ್ರಕಟಿಸುವುದು.

**(ಮ.ತಿ.ನೋ.)**

**ಆಂತರಿಕ ಅಂಕಗಳನ್ನು ಸಲ್ಲಿಸುವ ಕುರಿತು ಸೂಚನೆಗಳು:**

1. ಸೈದ್ಧಾಂತಿಕ (Theory) ಪರೀಕ್ಷೆಗಳು ಪ್ರಾರಂಭವಾಗುವುದಕ್ಕಿಂತ ಮುಂಚಿತವಾಗಿ UUCMS ತಂತ್ರಾಂಶದಲ್ಲಿ ನಿಗಧಿಪಡಿಸಲಾದ ದಿನಾಂಕದೊಳಗೆ ಆಂತರಿಕ ಅಂಕಗಳನ್ನು ಮತ್ತು ವಿದ್ಯಾರ್ಥಿಗಳ ಹಾಜರಾತಿ ವಿವರಗಳನ್ನು ಮುಖ್ಯಸ್ಥರು/ಸಂಯೋಜಕರು ಕಾಲೇಜಿನವರು ನಮೂದಿಸಿ, ಪರಿಶೀಲಿಸಿ ದಿನಾಂಕ:25.11.2024 ರೊಗಳಗೆ UUCMS ತಂತ್ರಾಂಶದಲ್ಲಿ ನಮೂದಿಸುವುದು ಹಾಗೂ ಧೃಡೀಕೃತ ಪ್ರತಿಯನ್ನು ಕುಲಸಚಿವರು(ಪರೀಕ್ಷಾಂಗ), ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು ಇವರಿಗೆ ಸಲ್ಲಿಸುವುದು ವಿಳಂಭವಾದಲ್ಲಿ ದಿನವೊಂದಕ್ಕೆ **ರೂ.1,000/-ಗಳಂತೆ ಗರಿಷ್ಠ ರೂ. 10,000-00 (ಹತ್ತು ಸಾವಿರ) ಗಳನ್ನು ದಂಡವಾಗಿ ವಿಧಿಸಲಾಗುತ್ತದೆ.**
2. ವಿದ್ಯಾರ್ಥಿಗಳಿಗೆ ಆಂತರಿಕ ಅಂಕಗಳನ್ನು ನೀಡುವುದು ಸಂಬಂಧಪಟ್ಟ ವಿಭಾಗಗಳ ಮುಖ್ಯಸ್ಥರು/ಸಂಯೋಜಕರ ಜವಾಬ್ದಾರಿಯಾಗಿದ್ದು,ಯಾವುದೇ ರೀತಿಯ ಲೋಪದೋಷಗಳಾಗದಂತೆ ಎಚ್ಚರಿಕೆ ವಹಿಸುವುದು. ಫಲಿತಾಂಶ ಪ್ರಕಟಗೊಂಡ ನಂತರ ಯಾವುದೇ ಕಾರಣಕ್ಕೂ ಆಂತರಿಕ ಅಂಕಗಳನ್ನು ಬದಲಿಸುವುದಿಲ್ಲ.

**ಎಲ್ಲಾ, ಮುಖ್ಯಸ್ಥರು/ನಿರ್ದೇಶಕರು/ಪ್ರಾಂಶುಪಾಲರು ಸಹಕರಿಸಬೇಕಾಗಿ ಕೋರಲಾಗಿದೆ.**

**ಆದೇಶದ ಮೇರೆಗೆ,**

27/10/24

**ಕುಲಸಚಿವರು (ಪರೀಕ್ಷಾಂಗ)**

ಕುಲಸಚಿವರು (ಮೌಲ್ಯಮಾಪನ)
ತುಮಕೂರು ವಿಶ್ವವಿದ್ಯಾನಿಲಯ
ತುಮಕೂರು

**ಗೆ,**

1. **ಮುಖ್ಯಸ್ಥರು ಸ್ನಾತಕೋತ್ತರ ವ್ಯವಹಾರ ಆಡಳಿತ ವಿಭಾಗ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.**
2. **ಪ್ರಾಂಶುಪಾಲರು/ನಿರ್ದೇಶಕರು, ಶ್ರಿ ಸಿದ್ದಾರ್ಥ ಇನ್ಸ್ಟಿಟ್ಯೂಟ್ ಆಫ್ ಮ್ಯಾನೇಜಿಮೆಂಟ್ ಸ್ಟಡೀಸ್, ಮರಳೂರು, ತುಮಕೂರು.**
3. **ಸಂಯೋಜಕರು, ಸ್ನಾತಕೋತ್ತರ ಎಂ.ಸಿ.ಎ ವಿಭಾಗ, ಮೇಳೆಕೋಟೆ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.**
4. **ಸಂಯೋಜಕರು, ಸ್ನಾತಕೋತ್ತರ ಎಂ.ಸಿ.ಎ, ತುಮಕೂರು ವಿಶ್ವವಿದ್ಯಾನಿಲಯದ ತಿಪಟೂರು ಸ್ನಾತಕೋತ್ತರ ಕೇಂದ್ರ, ತಿಪಟೂರು,**
5. **ಸಂಯೋಜಕರು, ಸ್ನಾತಕೋತ್ತರ ಎಲ್.ಎಲ್.ಎಂ ವಿಭಾಗ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.**
6. **ಪ್ರಾಂಶುಪಾಲರು ಶೇಷಾದ್ರಿಪುರಂ ಕಾಲೇಜು, #3, ವಿಕಾಸ ಭಾರತಿ, ಕಲ್ಪತರು ಬಡಾವಣೆ, ಗಂಗಸಂದ್ರ, ಮೇಳೆಕೋಟೆ, ತುಮಕೂರು-572 105.**

**ಪ್ರತಿಗಳು:**

1. ಸರ್ಕಾರದ ಅಧೀನ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ (ಉನ್ನತ ಶಿಕ್ಷಣ), ಎಂ.ಎಸ್. ಬಿಲ್ಡಿಂಗ್-2, ಡಾ. ಬಿ.ಆರ್.ಅಂಬೇಡ್ಕರ್ ವೀದಿ, ಬೆಂಗಳೂರು-01.
2. ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಅರಮನೆ ರಸ್ತೆ, ಬೆಂಗಳೂರು.
3. ಹಣಕಾಸು ಅಧಿಕಾರಿಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
4. ಉಪಕುಲಸಚಿವರು (ಶೈಕ್ಷಣಿಕ ವಿಭಾಗ), ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
5. ಮಾನ್ಯ ಕುಲಪತಿಗಳ/ಕುಲಸಚಿವರ ಕಾರ್ಯಾಲಯ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
6. ಸಿಸ್ಟಂ ಅನಾಲಿಸ್ಟ್, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು - ವಿಶ್ವವಿದ್ಯಾನಿಲಯದ ಅಂತರ್ಜಾಲ(Website)ದಲ್ಲಿ ಇಂದೇ ಪ್ರಕಟಿಸುವುದು.
7. ಫಲಿತಾಂಶ ಗಣಕೀಕರಣ ವಿಭಾಗ, ಪರೀಕ್ಷಾ ಭವನ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
8. ಕಛೇರಿ ಪ್ರತಿ.